

‘ಹ್ಞಾಂ, ಮರ್ತೇ ಹೋಗ್ತಿತ್ತು ನೋಡು ಈ ಗಡಿಬಿಡೀಲಿ. ದೋಸೆ ಕಾವಲಿ ಬುಕ್ ಮಾಡಿಕೊಡ್ತೇನೇಂತ ಹೇಳಿ ಅದನ್ನು ಮಾಡದೆ ನೀನು ಹೋಗಿ ಬಿಟ್ರೆ? ಇನ್ನಿವಳ ಸಮಯ ಕಾದು ಬುಕ್ ಮಾಡ್ಲಿಕ್ಕುಂಟಾ?’ ಎಂದರು ಅಮ್ಮ.

‘ಹೌದಲ್ಲಮ್ಮಾ. ಈಗ್ಲೇ ಬುಕ್ ಮಾಡ್ತೇನೆ’ ಎನ್ನುತ್ತಾ ಮೊಬೈಲ್ ಕೈಗೆತ್ತಿಕೊಂಡಳು. ‘ಅಮ್ಮಾ, ಭಾವನಾ ಹೆಸರಲ್ಲೇ ಬುಕ್ ಮಾಡ್ತೇನೆ. ಆಗದೇ?’

‘ಅದೇ ಒಳ್ಳೇದು. ಅವಳಾದ್ರೆ ಮೂರು ಹೊತ್ತೂ ಆಫೀಸಲ್ಲೇ ಇರ್ತಾಳೆ. ಬಂದ್ರೆ ಕಾರಲ್ಲಿ ಹಾಕ್ಕೊಳ್ತಾಳೆ. ನಾನಾದ್ರೆ ಅದನ್ನು ಕಾಯ್ತಾ ಇಲ್ಲೇ ಕೂರ್ಬೇಕಾದೀತು ಮತ್ತೆ’ ಎಂದರು ಕುಮುದಮ್ಮ.

‘ಸರಿ, ಹಾಗೇ ಮಾಡ್ತೇನೆ’ ಎಂದು ಭಾವನಾಳ ವಿಳಾಸಕ್ಕೇ ಬುಕ್ ಮಾಡುತ್ತಾ ‘ರಾತ್ರಿ ಬಂದಾಗ ಅವಳಿಗೊಂದು ನೆನಪು ಮಾಡಿಬಿಡು’ ಎಂದೂ ಬಾಲಂಗೋಚಿ ಸೇರಿಸಿದಳು.

ಭಾವನಾ ಯಾವತ್ತೂ ಮನೆಗೆ ಬೇಗ ಬಂದ ಚರಿತ್ರೆ ಇಟ್ಟುಕೊಂಡಿರಲಿಲ್ಲ. ಹಗಲಿಡೀ ಒಬ್ಬಂಟಿಯಾಗಿ ಕುಳಿತು ಬೇಸರವಾಗುವುದರಿಂದ ಕುಮುದಮ್ಮ ತಮ್ಮದೇ ವಯಸ್ಸಿನ ಮೂರ್ನಾಲ್ಕು ಗೆಳತಿಯರನ್ನು ಹತ್ತಿರ ಮಾಡಿಕೊಂಡಿದ್ದರು. ನಿತ್ಯವೂ ಬೆಳಗ್ಗಿನ ಹೊತ್ತು ಹಣ್ಣು, ತರಕಾರಿಯ ಹೆಸರಿನಲ್ಲಿ ಮಾರ್ಕೆಟ್ಟಿಗೆ, ಸಂಜೆ ಕೈಕಾಲು ಸಡಿಲಿಸಲು ಪಾರ್ಕಿಗೆ, ವಾರಕ್ಕೆ ಒಂದೆರಡು ಬಾರಿ ದೇವಸ್ಥಾನಕ್ಕೆ – ಹೀಗೆ ದಿನದೂಡುವ ಪರಿಪಾಠವಿದ್ದುದರಿಂದ ಕುಮುದಮ್ಮ ಹೆಚ್ಚು ಬೇಸರ ಪಟ್ಟುಕೊಳ್ಳುತ್ತಿರಲಿಲ್ಲ. ಅವರನ್ನು ಕಾಡುತ್ತಿದ್ದುದು ಒಂದೇ, ಭಾವನಾಳ ಮದುವೆ.

‘ಈಗ ಇಪ್ಪತ್ತೈದರಲ್ಲೆಲ್ಲ ಯಾರು ಮದುವೆ ಮಾಡಿಕೊಳ್ತಾರಮ್ಮ. ನನಗೆ ಇನ್ನೂ ಕೆಲವು ಗುರಿಯಿದೆ. ಒಂದೆರಡು ವರ್ಷಕ್ಕಾದರೂ ಕಂಪನಿ ಕಡೆಯಿಂದ ಅಮೆರಿಕಕ್ಕೆ ಹೋಗಿ ಬರಬೇಕು. ಅದ್ಯಾವಾಗ ಅವಕಾಶ ಬರುತ್ತೋ ಕಾಯಬೇಕು. ಅದಾದ ಮೇಲೆ ನೀನು ಹೇಳಿದ ಹಾಗೆ.’

‘ಈಗ್ಲೇ ಹೋಗಿ ಬಂದುಬಿಡು ಮಾರಾಯ್ತೀ. ನಮ್ಮನ್ಯಾಕೆ ಸತಾಯಿಸ್ತಿ’ ಎಂದು ಅಮ್ಮ ಹೇಳಿದರೆ, ‘ಅಯ್ಯೋ ನಾನು ನನ್ನಿಷ್ಟಕ್ಕೆ ಹೋಗೋದಲ್ಲ; ಕಂಪನಿ ಕಳಿಸ್ಬೇಕು. ಕಂಪನಿ ಅದಾಗಿಯೇ ಕಳಿಸ್ಬೇಕು. ಅಲ್ಲೀತನಕ ಸ್ವಲ್ಪ ತಾಳ್ಮೆ ಬೇಕು.’ ಇಂಥ ಸಂಭಾಷಣೆ ಅಮ್ಮ, ಮಗಳ ನಡುವೆ ಅದೆಷ್ಟೋ ಬಾರಿ ನಡೆದಿರಬಹುದು.

ಭಾವನಾ ಅಮೆರಿಕಕ್ಕೆ ಹೋಗುವ ಅವಕಾಶ ಪಡೆಯುವುದರ ಬಗ್ಗೆ ಜಾಟ್ ಕಂಪನಿಯ ಸಹೋದ್ಯೋಗಿಗಳಿಗೆ ಸಂದೇಹವಿರಲಿಲ್ಲ. ಅಂಥ ಅವಕಾಶ ಗಿಟ್ಟಿಸುವುದರ ಬಗ್ಗೆ ಅವರಿಗೆ ಅಸೂಯೆ ಇದ್ದರೂ ಒಮ್ಮೆ ಹೋಗಿಬಿಟ್ಟರೆ ಸ್ವಲ್ಪ ನೆಮ್ಮದಿಯಾದರೂ ಸಿಕ್ಕೀತು ಎಂದು ಭಾವಿಸುವವರಿಗೆ ಕೊರತೆಯಿರಲಿಲ್ಲ. ಅವಳನ್ನು ಕಳಿಸುವುದಕ್ಕಾಗಿ ಅವರು ಏನು ಮಾಡುವುದಕ್ಕೂ ಸಿದ್ಧರಿದ್ದರು. ಕಂಪನಿಯಾದರೊ ಭಾವನಾಳ ಕರ್ತವ್ಯ ನಿಭಾವಣೆಯ ಬಗ್ಗೆ ಪರಮ ಸಂತೃಪ್ತರು. ಕಳೆದ ವರ್ಷದ ಸಾಧನೆಗೆ ಐದು ಲಕ್ಷ ರೂಪಾಯಿ ಬೋನಸ್ ಬಂದಾಗ ತನ್ನ ಟೀಮಿನವರಿಗೆಲ್ಲ